**ಇಂದು ದಿನಾಂಕ 04.09.2025 ರಂದು ಪಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರಿಂದಃ**

**1.** ನಾನು Diploma ಓದಿದ್ದೇನೆ. ನಾನು ಬ್ಯೂಸಿನೆಸ್ ಮಾಡುತ್ತೇನೆ. ನನ್ನ ಕಛೇರಿ ಮೊದಲು ಕುಂದಾಪುರದಲ್ಲಿ ಇತ್ತು ಈಗ ಮಂಗಳೂರಿನಲ್ಲಿ ಮನೆಯಲ್ಲಿ ಬ್ಯೂಸಿನೆಸ್ ಮಾಡುತ್ತಿದ್ದೇನೆ. ವಾದಿ ಮತ್ತು ನಾನು ಒಂದೇ ಊರಿನವರು. ದಾವೆ ಹಾಕಿರುವ ವಿಚಾರ ನನಗೆ ವಾದಿ ತಿಳಿಸಿದರು. ಹಿಂದಿನ ಸಲ ಸಾಕ್ಷಿಗೆ ಬರಬೇಕು ಎಂದು ಹೇಳಿದರು. ಅಲ್ಲಿಯವರೆಗು ನನಗೆ ದಾವೆ ಬಗ್ಗೆ ಗೊತ್ತಿರಲಿಲ್ಲ. ಕರಾರಿನ ಬಗ್ಗೆ ಗೊತ್ತಿತ್ತು. ಪ್ರಮಾಣ ಪತ್ರವನ್ನು ತಯಾರು ಮಾಡಲು ಮಾಹಿತಿಯನ್ನು ಯಾರು ಕೊಟ್ಟಿದ್ದಾರೆ ಎಂದರೆ ವಾದಿ ಎನ್ನುತ್ತಾರೆ. ಪ್ರಮಾಣ ಪತ್ರದ ಅಂಶಗಳು ನನಗೆ ಗೊತ್ತಿದೆ. ನರಸಿಂಹಮೂರ್ತಿರವರನ್ನು ನಾನು ಕರಾರಿನ ದಿನ ನೋಡಿದ್ದೆ. ದಿನಾಂಕಃ30.09.2010 ರಂದು ನೋಡಿದ್ದೆ. ಆ ದಿನ ವಕೀಲರಾದ ಪ್ರಕಾಶ್ ಹೆಗ್ಡೆರವರ ಕಛೇರಿಯಲ್ಲಿ ನೋಡಿದ್ದೆ ವಾದಿ ಕರೆದುಕೊಂಡು ಹೋಗಿದ್ದರು ಆ ಕಾರಣದಿಂದ ಹೋಗಿದ್ದೆನು. ನನ್ನ ಕಂಪನಿ ಬೆಂಗಳೂರಿನಲ್ಲೂ ಇತ್ತು ಆದ ಕಾರಣ ಬೆಂಗಳೂರಿಗೆ ಬಂದಿದ್ದೆನು. ಕಛೇರಿ ವಾಣಿವಿಲಾಸ್ ರಸ್ತೆ ಬಸವನಗುಡಿಯಲ್ಲಿ ಇದೆ. ಅದರ ಬಗ್ಗೆ ದಾಖಲೆ ಇಲ್ಲ. ಅದು ನನ್ನ ಕಂಪನಿ ಅಲ್ಲ ಆ ಕಂಪನಿಯಲ್ಲಿ ನಾನು Vendor ಆಗಿದ್ದೆನು. ದಿನಾಂಕಃ30.09.2010 ರಂದು ನಾನು ಬೆಂಗಳೂರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಕಾಶ್ ಹೆಗ್ಡೆರವರ ಕಛೇರಿಗೆ ಮಧ್ಯಾಹ್ನ ಊಟನ ನಂತರ ಹೋದೆನು. ಆ ಸಮಯದಲ್ಲಿ ಕಛೇರಿಯಲ್ಲಿ ನರಸಿಂಹಮೂರ್ತಿ, ಮುನಿಯಪ್ಪ ಮತ್ತು ಜೂನಿಯರ್ ವಕೀಲರು ಇದ್ದರು. ಮುನಿಯಪ್ಪನನ್ನು ನಾನು ನೋಡಿದರೆ ಗುರುತು ಹಿಡಿಯುತ್ತೇನೆ. ಕರಾರಿನ ವಿಚಾರವಾಗಿ ಪ್ರಕಾಶ್ ಹೆಗ್ಡೆರವರ ಕಛೇರಿಗೆ ಕರೆದುಕೊಂಡು ಹೋದರು. ನಿಪಿ-1 ನ್ನು ಯಾರು ತಯಾರು ಮಾಡಿದರು ಎಂದು ನನಗೆ ಮಾಹಿತಿ ಇಲ್ಲ. ಕರಾರಿನ ಮಾತು-ಕತೆಯಾದಾಗ ನಾನು ಇರಲಿಲ್ಲ. ಕರಾರಿಗೆ ಸಹಿ ಮಾಡುವಾಗ ಮಾತ್ರ ಇದ್ದೆನು. ನನ್ನ ಮುಂದೆ ಕ್ರಯದ ಬಗ್ಗೆ ಸ್ವಲ್ಪ ಮಾತು-ಕತೆ ಆಯಿತು. ಸಹಿ ಮಾಡುವ ಮೊದಲು. ಮೊದಲು ರೂ.60 ಲಕ್ಷ ಎಂದು ಮಾತನಾಡಿದರು ಆನಂತರ ರೂ.70 ಲಕ್ಷ ಎಂದು ಮಾತನಾಡಿದರು. ದಾವಾ ಆಸ್ತಿಯನ್ನು ಮಾರಲು ರೂ.70 ಲಕ್ಷ ಹಣವನ್ನು ಕೇಳಿದರು. ವಾದಿ ಒಪ್ಪಿಕೊಂಡು ರೂ.37.5 ಲಕ್ಷವನ್ನು ಮುಂಗಡವಾಗಿ ಕೊಟ್ಟರು. ಅಷ್ಟೆ ಮಾತು-ಕತೆಯಾಗಿ ಕರಾರಿಗೆ ಸಹಿ ಮಾಡಿದ್ದರು. ಕರಾರಿಗೆ ಮೊದಲು ನರಸಿಂಹಮೂರ್ತಿ ಸಹಿ ಮಾಡಿದರು. ಆನಂತರ ವಾದಿ, ಮುನಿಯಪ್ಪ ಮತ್ತು ನಾನು ಮಾಡಿದೆವು. ಆ ದಿನ ಸುಮಾರು

ಮಧ್ಯಾಹ್ನ 3.30 ಗಂಟೆ ಆಗಿತ್ತು. ಆ ದಿನ ಮುಂಗಡ ಹಣವಾಗಿ ರೂ.37.5 ಲಕ್ಷ ಹಣವನ್ನು ಕೊಟ್ಟರು. ನಗದು ಮೂಲಕ ಕೊಟ್ಟರು. ರೂ.1,000 ಮತ್ತು ರೂ.500 ನೋಟುಗಳನ್ನು ಕೊಟ್ಟರು. ನರಸಿಂಹಮೂರ್ತಿರವರು ಹಣವನ್ನು ಸುಮಾರು 3/4 ಗಂಟೆ ಲೆಕ್ಕ ಹಾಕಿದರು. ಲೆಕ್ಕ ಹಾಕಿದ ನಂತರ ಸಹಿ ಮಾಡಿದರು. ನಿಪಿ-1 ರಲ್ಲಿ ನನ್ನ ವಿಳಾಸವನ್ನು ನಾನೇ ಬರೆದೆನು. ನಿಪಿ-1 ರಲ್ಲಿ 1 ನೇ ಸಾಕ್ಷಿಯ ವಿಳಾಸವನ್ನು ಮುನಿಯಪ್ಪನವರು ಬರೆದರು. ಆನಂತರ ಅದನ್ನು ಬರೆದದ್ದು ಯಾರೆಂದು ನೆನಪಿಲ್ಲ ಎನ್ನುತ್ತಾರೆ. ನಿಪಿ-1 ರ 2 ನೇ ಪುಟದಲ್ಲಿ ತಿದ್ದಿರುವುದು ಯಾರು ಎಂದರೆ ನರಸಿಂಹಮೂರ್ತಿರವರು ಎನ್ನುತ್ತಾರೆ. ಬೇರೆ ಯಾರೋ ತಿದ್ದಿದ್ದಾರೆ ಎಂದರೆ ಅವರೇ ಎನ್ನುತ್ತಾರೆ. ಅವರು ತಿದ್ದಿದ್ದರೆ ನೀಲಿ ಪೆನ್‌ನಲ್ಲಿ ಇರುತ್ತಿತ್ತು ಎಂದರೆ ಸಹಿಯನ್ನು ಕೊನೆಯಲ್ಲಿ ಮಾಡಿದ್ದಾರೆ ಎನ್ನುತ್ತಾರೆ. ನಿಪಿ-1 ರಲ್ಲಿ 2, 4 ನೇ ಪುಟಗಳಲ್ಲಿ ತಿದ್ದಿರುವವರು ನರಸಿಂಹಮೂರ್ತಿರವರೇ. ಸಹಿ ಹಾಕಿದ ನಂತರ 4 ನೇ ಪುಟದಲ್ಲಿ ವಿಳಾಸ ಬರೆದಿದ್ದಾರೆ. ಸಹಿ ಹಾಕಿ ನಾನೇ ನನ್ನ ವಿಳಾಸವನ್ನು ಬರೆದಿದ್ದೇನೆ. ಓ.ಎಸ್.ನಂ.2352/2006 ಎಂದು ಬರೆದಿದ್ದು ಆ ದಾವೆ ಬಗ್ಗೆ ನನಗೆ ಗೊತ್ತಿಲ್ಲ. ಕರಾರಿನ ಬಗ್ಗೆ ನನಗೆ ಏನು ಗೊತ್ತಿಲ್ಲದಿದ್ದರೂ ನಾನು ಮತ್ತು ವಾದಿ ಕರಾರನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನರಸಿಂಹಮೂರ್ತಿರವರು ಯಾವಾಗ ಮೃತರಾದರು ಎಂದು ನನಗೆ ಗೊತ್ತಿಲ್ಲ. ನರಸಿಂಹಮೂರ್ತಿರವರು ಮೃತರಾದ ನಂತರ ದಾವಾ ಆಸ್ತಿಯ ಮೇಲೆ ಏನೇನು ವ್ಯವಹಾರವಾಗಿದೆ ಎಂದು ನನಗೆ ಗೊತ್ತಿಲ್ಲ. ನರಸಿಂಹಮೂರ್ತಿರವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ನನಗೆ ಏನು ಗೊತ್ತಿಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರ ಹಾಕಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆ ನಾನು ಹೋಗುವವತ್ತಿಗೆ ಸಿದ್ಧವಿತ್ತು. ತಿದ್ದುಪಡಿಯನ್ನು ಆನಂತರ ಮಾಡಿದರು. ಆ ಸಮಯದಲ್ಲಿ ಹೊಸ ಕರಾರನ್ನು ಮಾಡಬೇಕು ಎಂದು ಮಾತು-ಕತೆಯಾಗಿಲ್ಲ. ಯಾರ ಕಛೇರಿಯಲ್ಲಿ ತಯಾರಾಗಿದೆ ಎಂದು ಮಾಹಿತಿ ಇಲ್ಲ. ಪೋಡಿ ಮಾಡಿಸಬೇಕೆಂಬ ವಿಚಾರ ನನಗೆ ಗೊತ್ತಿಲ್ಲ. ವಾದಿಗೆ ಸಹಾಯ ಮಾಡಲು ಹಿಂದಿನ ದಿನಾಂಕದ ಕರಾರಿಗೆ ಸಹಿ ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**